ಇ. ಗುರುತಿಸಲ್ಪಟ್ಟ ಹೊಸ ಪ್ರೇಕ್ಷಣೀಯ ಸ್ಥಳಗಳ ಸಂಖ್ಯೆ ಮತ್ತು ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಗಳು. (ವಿವರಗಳನ್ನು ಒದಗಿಸುವುದು)

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ನಾಮದ ಚಿಲುಮೆಯನ್ನು ಒಳಗೊಂಡಂತೆ ಇಡೀ ದೇವರಾಯನದುರ್ಗವನ್ನು ಪ್ರವಾಸೋದ್ಯಮ ಇಲಾಖೆ ಪ್ರೇಕ್ಷಣೀಯ ಸ್ಥಳವೆಂದು ಗುರುತಿಸಿದೆ.

ಆ. ಆ) ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಸಿ' ಗುಂಪಿನತಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ 250ಕ್ಕೂ ಹೆಚ್ಚು ಸ್ಥಳಗಳನ್ನು ಗುರುತಿಸಲಾಗಿದೆ.

ಆ) ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಖಾಸಗಿ ಉದ್ಯಮಿಗಳನ್ನು ಉತ್ತೇಜಿಸಲು ರಿಯಾಯಿತಿ ಹಾಗೂ ಉತ್ತೇಜನಗಳನ್ನು ಒಳಗೊಂಡು ಕರ್ನಾಟಕ ಪ್ರವಾಸೋದ್ಯಮ ನೀತಿಯ ಘೋಷಣೆ.

ಇ) ಪ್ರವಾಸಿ ಸೌಲಭ್ಯವನ್ನು ಒದಗಿಸುವುದು ಮತ್ತು ಹೆಚ್ಚು ಪ್ರವಾಸಿಗರನ್ನು ಆಕರ್ಷಿಸುವುದು ಇಲಾಖೆಯ ಮೂಲ ಕರ್ತವ್ಯವಾಗಿದೆ.

ಟೆಕ್‌ಸಾಕ್ ಸಂಸ್ಥೆಯ ಅಧ್ಯಯನದ ರೀತ್ಯ 1990ರಲ್ಲಿ ರಾಜ್ಯ ಸರ್ಕಾರ ಪ್ರವಾಸೋದ್ಯಮದಿಂದ ರೂ. 4,168 ಲಕ್ಷಗಳನ್ನು ಗಳಿಸಿವೆ.

ಇ. ರಾಜ್ಯದ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನು ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ ಗುರುತಿಸಲಾಗಿದೆ.

ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಉತ್ತೇಜನ ಹಾಗೂ ರಿಯಾಯಿತಿಗಳನ್ನು ನೀಡಿ ಖಾಸಗಿ ಉದ್ಯಮಿಗಳನ್ನು ಉತ್ತೇಜಿಸುವುದು.

## ಗಾಲಿಗಳ ಮೇಲೆ ಅರಮನೆ ಯೋಜನೆ'ಯನ್ನು ಜಾರಿಗೆ ತರುವ ಬಗ್ಗೆ.

**551 (1347):** ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗಾಲಿಗಳ ಮೇಲೆ ಅರಮನೆ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರವು ರೈಲ್ವೆ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಿದೆಯೇ ?

ಆ. ಹಾಗಿದ್ದಲ್ಲಿ ರೈಲ್ವೆ ಇಲಾಖೆಗೆ ಸಲ್ಲಿಸಿದ ಪ್ರಸ್ತಾವನೆಯ ವಿವರ:

ಇ. ನಿಯೋಜಿತ ಗಾಲಿಗಳ ಮೇಲೆ ಅರಮನೆ ಯೋಜನೆಯು ಎಂದಿನಿಂದ ಜಾರಿಗೆ ಬರುವುದು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು

ಆ. 1. ಭಾರತ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದೆ. ಮಾರ್ಗವು– ಬೆಂಗಳೂರು – ಮೈಸೂರು – ಹಾಸನ – ಹೊಸಪೇಟೆ – ಬೆಂಗಳೂರನ್ನು ಒಳಗೊಂಡಿದೆ.

2. ಪ್ರಮುಖ ಪ್ರವಾಸಿ ಸ್ಥಳಗಳ ವೀಕ್ಷಣೆ.
3. ಸಾಂಸ್ಕೃತಿಕ ಕಾರ್ಯಕ್ರಮಗಳು.

ಇ. ಭಾರತ ಸರ್ಕಾರವು ಅನುಮೋದಿಸಿದ ನಂತರ.

## ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ.

**552 (1334 – ಎ):** ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರವು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸಿರುವುದೇ ?

ಆ. ಹಾಗಿದ್ದಲ್ಲಿ ವಿಧಾನಸೌಧ ಹಾಗೂ ಮತ್ತಿತರ ಸರ್ಕಾರಿ ಕಛೇರಿಗಳಲ್ಲಿ ಧೂಮಪಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ ?

ಇ. ಇದುವರೆಗೆ ದಾಖಲೆ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಈ. ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲು ಏನು ಕ್ರಮ ಜರುಗಿಸಲಾಗುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–

ಅ. ರಾಜ್ಯಾದ್ಯಂತ ಸರ್ಕಾರಿ ಕಛೇರಿಗಳಲ್ಲಿ ಹಾಗೂ ಸರ್ಕಾರದ ನಿಯಂತ್ರಣದಲ್ಲಿ ಇರುವ ಸಾರ್ವಜನಿಕ ಸಂಸ್ಥೆಗಳ ಆವರಣದಲ್ಲಿ ಒಳಗೆ ಧೂಮಪಾನ ಮತ್ತು ಉಗುಳುವುದನ್ನು ನಿಷೇಧಿಸಿ ಕರ್ನಾಟಕ ಪೋಲೀಸ್ ಕಾಯಿದೆ 1963ರ ಸೆಕ್ಷನ್ 92ರ ಉಪ ಸೆಕ್ಷನ್ (1)ರ ಕ್ಲಾಜ್ (ವೈ)ನ ಕೲಂಗಳನ್ನು ವಿಸ್ತರಿಸಿ ದಿನಾಂಕ 8.1.93ರಂದು ಆದೇಶ ಹೊರಡಿಸಿದೆ.

ಆ. ಇಲ್ಲ.

ಇ. ಈ ಬಗ್ಗೆ ಇತ್ತೀಚೆಗಷ್ಟೇ ಆದೇಶಗಳನ್ನು ಹೊರಡಿಸಿರುವುದರಿಂದ ಉಲ್ಲಂಘನೆಯ ವಿರುದ್ಧ ಇನ್ನು ಮುಂದೆ ಪ್ರಕರಣಗಳನ್ನು ದಾಖಲಿಸಲು ಕ್ರಮ ಜರುಗಿಸಲಾಗುವುದು.

ಈ. ಇದನ್ನು ಪರಿಶೀಲಿಸಲಾಗುವುದು.

## ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಲು ಸರ್ಕಾರದವರು ಕೈಕೊಂಡ ಕ್ರಮಗಳು.

**554 (992):** ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಹೊಸ ಸರ್ಕಾರದವರು ಬಂದ ನಂತರ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಯಾವ ಯಾವ ಕ್ರಮವನ್ನು ಕೈಗೊಂಡಿರುವರು ?

ಆ. ರಾಜ್ಯದಲ್ಲಿ ಇನ್ನೂವರೆಗೂ ಪ್ರತಿಯೊಂದೂ ಇಲಾಖೆಗಳಲ್ಲಿ ಇಂಗ್ಲೀಷ್‌ನಲ್ಲಿಯೇ ಪತ್ರವ್ಯವಹಾರ ನಡೆಯುತ್ತಿದೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಸರ್ಕಾರದವರು ಅಂಥ ಇಲಾಖೆಗಳವರ ಮೇಲೆ ಯಾವ ಕ್ರಮ ಕೈಗೊಂಡಿರುವರು ಹಾಗೂ ಇಂಗ್ಲೀಷ್‌ನಲ್ಲಿಯೇ ಪತ್ರವ್ಯವಹಾರ ಮಾಡುತ್ತಿರುವ ಇಲಾಖೆಗಳು ಯಾವುವು ?